ಶ್ರೀ. ಎ. ರಾಮರಾಜ್ : ಗ್ರಾಹಕರಿಗೆ ತೊಂದರೆಯಾಗುತ್ತದೆ. ಏಕೆಂದರೆ....

MR. SPEAKER : You don't enjoy any special status in the House. ನಿಮಗೇನೂ ವಿಶೇಷ ಪ್ರಿವಿಲಿಜೆಸ್ ಇಲ್ಲ. Rule is applicable to all.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕೋಸ್ಕರ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದು ಬಹಳ ಮುಖ್ಯವಾಗಿರುವುದರಿಂದ ಕೇವಲ ಪ್ರಸ್ತಾಪ ಮಾಡಿದರೆ, ಸರ್ಕಾರ ಏನೋ ಒಂದು ಉತ್ತರ ಹೇಳಿದರೆ ಪರಿಹಾರವಾಗುವುದಿಲ್ಲ. ಅದಕ್ಕಾಗಿ, ಇದನ್ನು ಪ್ರಸ್ತಾಪಿಸಲು ಬೇರೆ ಯಾವುದಾದರೂ ರೂಪದಲ್ಲಿ ಅವಕಾಶ ಮಾಡಿ ಕೊಟ್ಟರೆ ಅನುಕೂಲವಾಗುತ್ತದೆ.

ಅಧ್ಯಕ್ಷರು : ಯೋಜನೆ ಮಾಡೋಣ.

7ನೇ ತರಗತಿಯ ಪಬ್ಲಿಕ್ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿ ಅಂಕಪಟ್ಟಿ ನೀಡುವಲ್ಲಿ ಗೊಂದಲ.

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಈ ಬಾರಿ 7ನೇ ತರಗತಿಯ ಪಬ್ಲಿಕ್ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದೆ. ಮಾರ್ಕ್ಸ್‌ಕಾರ್ಡ್ ಇಷ್ಯೂನಲ್ಲಿ ಬಹಳಷ್ಟು ಗೊಂದಲವಾಗಿದೆ. ದಕ್ಷಣ ಕನ್ನಡ ಮತ್ತು ವಿಜಾಪುರ ಜಿಲ್ಲೆಗಳ ಶೇ. 20ಕ್ಕಿಂತ ಹೆಚ್ಚು ವಿದ್ಯಾರ್ಥಿಗಳ ಅಂಕಪಟ್ಟಿಗಳಲ್ಲಿ ಮಾರ್ಕ್ಸನ್ನೇ ಮೆನ್‌ಷನ್ ಮಾಡಿಲ್ಲ. ಅದರ ಬದಲಿಗೆ ಫಲಿತಾಂಶ ಎಂಬ ಶೀರ್ಷಿಕೆಯಡಿಯಲ್ಲಿ ಕೇವಲ 'ಸಿ' ಎಂದು ನಮೂದಿಸಿದ್ದಾರೆ. ಕ್ಲಾಸ್‌ನಲ್ಲಿ ಶೇ. 90 ಅಂಕಗಳನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳ ಅಂಕಪಟ್ಟಿಗಳಲ್ಲಿ ಕೂಡ ಇದೇ ವ್ಯವಸ್ಥೆಯಾಗಿದೆ. ಅದರ ಬಗ್ಗೆ ಅಧಿಕಾರಿಗಳು ನಿರ್ಧಾರಾತ್ಮಕವಾದ ಉತ್ತರ ಕೊಡುತ್ತಿಲ್ಲ. ಸಾಮಾನ್ಯವಾಗಿ ಡಿಸ್ಟಿಂಕ್ಷನ್ ಎಂಬಲ್ಲಿ 'ಡಿ' ಎಂದೂ ಅಥವಾ ಫೇಲ್ ಎಂಬಲ್ಲಿ 'ಎಫ್' ಎಂದೂ ಹಾಕುವುದು ರೂಢಿ ಇವೆರಡನ್ನೂ ಬಿಟ್ಟು 'ಸಿ' ಎಂದು ಮೆನ್‌ಷನ್ ಮಾಡಿದರೆ ಅದರ ಅರ್ಥವೇನು ಇದರಿಂದ ಮುಂದಿನ ವಿದ್ಯಾಭ್ಯಾಸಕ್ಕೆ ಈ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಜೂನ್ 1ನೇ ತಾರೀಖಿನಿಂದ ಶಾಲೆಗಳು ಪ್ರಾರಂಭವಾಗುತ್ತವೆ. 'ಸಿ' ಎಂಬುದು ಕಂಪ್ಯೂಟರ್ ದೋಷವೇ ಅಥವಾ ಕಂಪ್ಯೂಟರ್ ಫೀಡಿಂಗ್ ಮಾಡಿಲ್ಲವೇ? ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ತಾವು ಚಿಂತನೆ ಮಾಡಬೇಕಾಗುತ್ತದೆ. ತಕ್ಷಣ ಇದನ್ನು ರದ್ದುಪಡಿಸಿ, ಸರಿಯಾದ ರೀತಿಯಲ್ಲಿ ಅಂಕಪಟ್ಟಿಗಳನ್ನು ವಿದ್ಯಾರ್ಥಿಗಳಿಗೆ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ, ವಾರ್ತಾ ಮತ್ತು ಪ್ರಚಾರ ಸಚಿವರು) : ಮಾನ್ಯ ಮಿತ್ರರಾದ ಶ್ರೀ ಕೆ. ಜಯರಾಮಶೆಟ್ಟಿರವರು ಹೇಳುವ ವಿಚಾರ ಸರಿಯಾದರೆ, ದಕ್ಷಿಣ ಕನ್ನಡ ಜಿಲ್ಲೆಯ ಎಜ್ಯುಕೇಷನ್ ಆಫೀಸರ್‌ಯಾರಿದ್ದಾರೆ, ಡಿಡಿಪಿಐ ಅವರನ್ನು ಸಂಪರ್ಕಿಸಿ ಲೋಪಗಳೇನಾದರೂ ಇದ್ದರೆ, ಅದನ್ನು ಸರಿಪಡಿಸುವ ಹಾಗೆ ಮತ್ತು ಮಕ್ಕಳ ಭವಿಷ್ಯಕ್ಕೆ ಯಾವುದೇ ರೀತಿಯಲ್ಲಿ ತೊಂದರೆಯಾಗದ ಹಾಗೆ ಎಲ್ಲಾ ರೀತಿಯ ಕ್ರಮಗಳನ್ನು ನಾವು ಕೈಗೊಳ್ಳುತ್ತೇವೆ.